## ಸೂಕ್ತಿಪ್ರಭ

ಮನುಷ್ಯ ತನ್ನ ಕರ್ಮದಿಂದಾಗಿಯೇ ಕಷ್ಟಗಳನ್ನು ಅನುಭವಿಸುವುದು. ಆದ್ದರಿಂದ ತನ್ನ ಕಷ್ಟಗಳಿಗೆ ಬೇರೆಯವರನ್ನು ದೂರಬಾರದು. ಭಗವಂತನನ್ನು ಪ್ರಾರ್ಥಿಸುತ್ತ ಅವನ ಕೃಪೆಯನ್ನೇ ಅವಲಂಬಿಸಿಕೊಂಡಿರಬೇಕು. ತಾಳ್ಮೆಯಿಂದ ಕಷ್ಟಗಳನ್ನು ಸಹಿಸಿಕೊಳ್ಳಲು ಕಲಿಯಬೇಕು.

* *

ಭೂಮಿಯಂತೆ ಸಹನೆ ಇರಬೇಕು. ಭೂಮಿಯ ಮೇಲೆ ಎಂತೆಂತಹ ಕೆಟ್ಟ ಕೆಲಸಗಳು ನಡೆಯುತ್ತಿರುತ್ತವೆ! ಆದರೂ ಭೂಮಿತಾಯಿ ಅವನ್ನೆಲ್ಲ ಮೌನವಾಗಿ ಸಹಿಸಿಕೊಳ್ಳುತ್ತಾಳೆ. ಮನುಷ್ಯನೂ ಹಾಗೆಯೇ ಇರಬೇಕು.

* *

ನಿನಗೆ ಬೆಳಕು ಬೇಕಾದಾಗ, ನಿನಗೆ ಯಾವುದಾದರೂ ಸಂದೇಹ ಅಥವಾ ಕಷ್ಟಗಳು ಬಂದಾಗ ಭಗವಂತನನ್ನು ಪ್ರಾರ್ಥಿಸು. ಅವನು ನಿನ್ನ ಮನಸ್ಸಿನ ಕೊಳೆಯನ್ನು ತೊಳೆದು ಶಾಂತಿ-ಮುಕ್ತಿ ನೀಡುತ್ತಾನೆ.

* *

ಯಾವಾಗಲೂ ಭಗವಂತನನ್ನೇ ಚಿಂತಿಸುವವನಿಗೆ ಯಾವ ರೀತಿಯಲ್ಲಿ ತಾನೇ ಕೇಡಾಗಲು ಸಾಧ್ಯ?

* *

ಈ ಎಲ್ಲ ಒಣಚರ್ಚೆ, ಅರೆಬರೆ ತತ್ತ್ವಜ್ಞಾನವನ್ನು ಬಿಟ್ಟುಬಿಡು. ವಿಚಾರದಿಂದ ಭಗವಂತನನ್ನು ಅರಿಯಲು ಯಾರಿಗೆ ತಾನೇ ಸಾಧ್ಯವಾಗಿದೆ?

* *

ಮಗು, ನೀನು ತುಂಬ ಪುಣ್ಯ ಮಾಡಿರುವುದರಿಂದ ನಿನಗೆ ಈ ಮನುಷ್ಯ ಜನ್ಮ ಸಿಕ್ಕಿದೆ. ದೇವರಲ್ಲಿ ಭಕ್ತಿಯಿಡು. ಕಷ್ಟಪಟ್ಟು ಕೆಲಸಮಾಡು. ಪ್ರಯತ್ನಪಡದೆ ಏನನ್ನಾದರೂ ಸಾಧಿಸಲು ಸಾಧ್ಯವೇ? ಮನೆಯ ಕೆಲಸ-ಕಾರ್ಯಗಳ ಮಧ್ಯದಲ್ಲೂ ಸ್ವಲ್ಪ ಸಮಯವನ್ನು ಪ್ರಾರ್ಥನೆಗೆ ಎಂದು ಮೀಸಲಾಗಿಡು.

* *

ಮಗು, ಈ ಪ್ರಪಂಚ ಎನ್ನುವುದು ಒಂದು ಆಳವಾದ ಜೌಗು ನೆಲ ಇದ್ದಹಾಗೆ. ಒಮ್ಮೆ ಮನುಷ್ಯ ಅದರಲ್ಲಿ ಸಿಕ್ಕಿಕೊಂಡ ಎಂದರೆ ಮತ್ತೆ ಮೇಲೆದ್ದು ಬರುವುದು ಬಹಳ ಕಷ್ಟ..... ಭಗವಂತನ ನಾಮವನ್ನು ಜಪಿಸುತ್ತಿರು. ಹಾಗೆ ಮಾಡಿದರೆ ಭಗವಂತ ಒಂದು ದಿನ ನಿನ್ನೆಲ್ಲ ಬಂಧನಗಳನ್ನೂ ತೆಗೆದುಹಾಕುತ್ತಾನೆ. ಮಗು, ಸ್ವತಃ ಭಗವಂತನೇ ಬಂಧನವನ್ನು ತೆಗೆದುಹಾಕದಿದ್ದರೆ ಯಾರಿಗಾದರೂ ಮುಕ್ತಿ ಸಿಗಲು ಸಾಧ್ಯವೇ?

ಶ್ರೀಮಾತೆ ಶಾರದಾದೇವಿ

## ಪ್ರಾರ್ಥನೆ

### *ಜಗನ್ಮಾತೆ ಶ್ರೀಶಾರದಾದೇವಿ*

ತಾಯಿದೇವಿ ಜಗಜ್ಜನನಿ ದಿವ್ಯಮಾತೆ ಶಾರದೆ
ನಮೋ ದೇವಿ ನಮೋ ತಾಯಿ ಶಕ್ತಿದಾತೆ ಶಾರದೆ ||

ವೇದಮಾತೆ ಮುಕುತಿದಾತೆ ನಮೋ ದೇವಿ ಶಾರದೆ
ಯೋಗಮಾತೆ ಭಕುತಿದಾತೆ ನಮೋ ಜನನಿ ಶಾರದೆ ||

ಕ್ಷಮಾಶೀಲೆ ಕರುಣೆಗಂಗೆ ಶಕ್ತಿದೇವಿ ಶಾರದೆ
ಸತ್ಯರೂಪೆ ಶಾಂತಿದಾತೆ ದಿವ್ಯಜ್ಯೋತಿ ಶಾರದೆ ||

ಗೃಹಿಣಿದೇವಿ ಶುಭ್ರವಸನೆ ಮಹಾಸಾಧ್ವಿ ಶಾರದೆ
ತಪೋನಿಧಿ ಪವಿತ್ರ ದೇವಿ ತ್ಯಾಗಶೀಲೆ ಶಾರದೆ ||

ಯುಗಾಚಾರ್ಯ ಯೋಗಿಯಿಂದ ಪೂಜೆ ಪಡೆದ ಶಾರದೆ
ರಾಮಕೃಷ್ಣ ಪರಮಹಂಸ ದೇವಪತ್ನಿ ಶಾರದೆ ||

ಮಂತ್ರದೀಕ್ಷೆ ಕೃಪಾಭಿಕ್ಷೆ ಜನಕೆ ಇತ್ತ ಶಾರದೆ
ತತ್ತ್ವಬೋಧೆ ಯೋಗವಿದ್ಯೆ ಜಗಕೆ ಕೊಟ್ಟ ಶಾರದೆ ||

ಲಲಿತೆ ದುರ್ಗೇವಾಣಿ ಲಕ್ಷ್ಮೀ ಮಹಾಮಾಯೆ ಶಾರದೆ
ಸೀತೆ ರಾಧೆ ಯೋಗಮಾತೆ ಮಹಾಶಕ್ತಿ ಶಾರದೆ ||

ನಗುವ ಬೀರು ಕೃಪೆಯ ತೋರು ಕೃಪಾಮಯಿ ಶಾರದೆ
ಭಕುತಿ ನೀಡು ಶಕುತಿ ನೀಡು ಮಹಾದೇವಿ ಶಾರದೆ ||

ಯೋಗಸಿದ್ಧಿ ಸುಖವ ನೀಡು ಸಿದ್ಧಿದಾತೆ ಶಾರದೆ
ಜ್ಞಾನಭಿಕ್ಷೆ ನೀಡಿ ಹರಸು ಅನ್ನದಾತೆ ಶಾರದೆ ||

ನಮನ ನಿನಗೆ ಶರಣು ನಿನಗೆ ಭಕ್ತಿದಾತೆ ಶಾರದೆ
ಹರಿದು ಬಿಸುಡು ಭವದ ಪಾಶ ಮುಕ್ತಿದಾತೆ ಶಾರದೆ ||

—ಎದುರ್ಕಳ ಕೆ. ಶಂಕರನಾರಾಯಣ ಭಟ್